## ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಬೆಂಗಳೂರು-೫೫

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನಂ.27, ರಾಜಾಜಿನಗರ ಇಂಡಸ್ಟ್ರೀಯಲ್ ಸಬರ್ಬ್, ಅಂಚೆ ಪೆಟ್ಟಿ ಸಂಖ್ಯೆ: 5531,
ಬೆಂಗಳೂರು-ಪುಣೆ ಹೆದ್ದಾರಿ, ಬೆಂಗಳೂರು-560 055

ಸಂಖ್ಯೆ: ಕಸಾಮಾನಿ/ಮಾಸಂಅ/2022-23/ ದಿನಾಂಕ: 17.06.2022

# ನೇಮಕಾತಿ ಪ್ರಾಧಿಕಾರದ ನಡವಳಿಗಳು

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ದಿನಾಂಕ 21.11.2001 ರ ವಿಶೇಷ ನೇಮಕಾತಿ ನಿಯಮದನ್ವಯ ನೇಮಕಾತಿ ಮಾಡಿದ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಗ್ರೂಪ್-3 ಕಾರ್ಮಿಕರು (ಆಪರೇಟರ್) (ಗ್ರಾಮೀಣ ಅಭ್ಯರ್ಥಿ) ಹುದ್ದೆಗೆ ಕಾರ್ಯವರದಿ ಮಾಡಿಕೊಳ್ಳದ ಅಭ್ಯರ್ಥಿಯ ಬದಲಾಗಿ ಹೆಚ್ಚುವರಿ ಪಟ್ಟಿಯಲ್ಲಿ (Additional List) ಗುರುತಿಸಿದ್ದ ಶ್ರೀ ಮಂಗ್ಲಪ್ಪ ಲಮಾಣಿ ರವರ ಆಯ್ಕೆಯನ್ನು ಪ್ರಶ್ನಿಸಿ, ಶ್ರೀ ವಿನೋದ್‌ಕುಮಾರ್.ಎಸ್ ಎಂಬ ಅಭ್ಯರ್ಥಿಯು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 49605/2015 (ಎಸ್-ಆರ್‌ಇಎಸ್) ಅನ್ನು ಸಲ್ಲಿಸಿದ್ದರು. ಮಾನ್ಯ ನ್ಯಾಯಾಲಯವು ದಿನಾಂಕ 06.10.2021 ರಂದು ಪ್ರಕರಣದ ಅಂತಿಮ ಆದೇಶವನ್ನು ಹೊರಡಿಸಿ ಅರ್ಜಿದಾರರ ರಿಟ್ ಅರ್ಜಿಯನ್ನು ತಿರಸ್ಕರಿಸಿರುತ್ತದೆ.

ದಿನಾಂಕ:09.05.2015 ರಂದು ನೇಮಕಾತಿ ಪ್ರಾಧಿಕಾರಿಯವರು ಹೊರಡಿಸಿರುವ ಆದೇಶದಲ್ಲಿ ಅಡಿಷನಲ್ ಲಿಸ್ಟ್‌ನಲ್ಲಿದ್ದ 11 ಅಭ್ಯರ್ಥಿಗಳ ಪೈಕಿ 10 ಅರ್ಹ ಅಭ್ಯರ್ಥಿಗಳಿಗೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ಇನ್ನುಳಿದ ಒಬ್ಬ ಅಭ್ಯರ್ಥಿಯ ವಿಷಯದಲ್ಲಿ ಗ್ರಾಮೀಣ ಅಭ್ಯರ್ಥಿ ವ್ಯಾಸಂಗ ಪ್ರಮಾಣ ಪತ್ರದ ಬಗ್ಗೆ ಸ್ಪಷ್ಟೀಕರಣ ಬಂದನಂತರ ಕ್ರಮ ಕೈಗೊಳ್ಳಲಾಗುವುದೆಂದು ನಮೂದಿಸಿರುತ್ತಾರೆ.

ಮೇಲಿನ ಹಿನ್ನಲೆಯಲ್ಲಿ ಶ್ರೀ ಮಂಗ್ಲಪ್ಪ ಲಮಾಣಿ ಸನ್ ಆಫ್ ಕುಬ್ಬಪ್ಪ ಲಮಾಣಿ, ಗೆದ್ದಲಮರಿ, ಹಡಲಗೇರಿ ಪೋಸ್ಟ್, ಮುದ್ದೇಬಿಹಾಳ ತಾಲ್ಲೂಕು, ವಿಜಯಪುರ ಜಿಲ್ಲೆ – 586245 ಇವರು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಶಾಲೆಗಳಲ್ಲಿ ವ್ಯಾಸಂಗಮಾಡಿರುವ ಬಗ್ಗೆ ದೃಢೀಕರಣ ನೀಡಲು ದಿನಾಂಕ: 04.04.2022 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುದ್ದೇಬಿಹಾಳ ತಾ।।, ವಿಜಯಪುರ ಜಿಲ್ಲೆ ಮತ್ತು ದಿನಾಂಕ 21.05.2022 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಸವನ ಬಾಗೇವಾಡಿ, ವಿಜಯಪುರ ಜಿಲ್ಲೆ ಇವರುಗಳಿಗೆ ಪತ್ರವನ್ನು ಬರೆಯಲಾಗಿತ್ತು. ಈ ಸಂಬಂಧ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಸವನಬಾಗೇವಾಡಿ ತಾ।।, ವಿಜಯಪುರ ಜಿಲ್ಲೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುದ್ದೇಬಿಹಾಳ ತಾ।।, ವಿಜಯಪುರ ಜಿಲ್ಲೆ ಇವರುಗಳು ದಿನಾಂಕ: 25.04.2022 ಮತ್ತು 08.06.2022 ರ ತಮ್ಮ ಪತ್ರಗಳಲ್ಲಿ ಶ್ರೀ ಮಂಗ್ಲಪ್ಪ ಲಮಾಣಿ ಸನ್ ಆಫ್ ಕುಬ್ಬಪ್ಪ ಲಮಾಣಿ, ಇವರು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ದಾಖಲೆಗಳ ನೈಜತೆಯ ಬಗ್ಗೆ ದೃಢೀಕರಿಸಿರುತ್ತಾರೆ.

ಆದ್ದರಿಂದ ಶ್ರೀ ಮಂಗ್ಲಪ್ಪ ಲಮಾಣಿ ಸನ್ ಆಫ್ ಕುಬ್ಬಪ್ಪ ಲಮಾಣಿ, ಇವರು ಬ್ಯಾಕ್‌ಲಾಗ್ ನೇರ ನೇಮಕಾತಿ ಹುದ್ದೆಯಾದ ಗ್ರೂಪ್-ಡಿ ಕಾರ್ಮಿಕರು (ಆಪರೇಟರ್) ಹುದ್ದೆಗೆ ಗ್ರಾಮೀಣ ಅಭ್ಯರ್ಥಿ ಪರಿಶಿಷ್ಟ ಜಾತಿ ಕೋಟಾದಡಿ ಆಯ್ಕೆಯಾಗಿರುವ ಬಗ್ಗೆ ಅಭ್ಯರ್ಥಿಯ ಅಂತಿಮ ಆಯ್ಕೆಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

| ಕ್ರ. ಸಂ | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ | ಸಮತಳ ಮೀಸಲಾತಿ | ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಯ ಹೆಸರು |
|---|---|---|---|---|
| 1 | ಗ್ರೂಪ್-ಡಿ ಕಾರ್ಮಿಕರು (ಆಪರೇಟರ್) | 01 | ಎಸ್.ಸಿ (ಗ್ರಾಮೀಣ) | ಶ್ರೀ ಮಂಗ್ಲಪ್ಪ ಲಮಾಣಿ |

18/6/22

**ವ್ಯವಸ್ಥಾಪಕ ನಿರ್ದೇಶಕರು**
ಹಾಗೂ ನೇಮಕಾತಿ ಪ್ರಾಧಿಕಾರ

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಶ್ರೀಗಂಧನಗರ, ಅಂಚೆಪೆಟ್ಟಿಗೆ ಸಂಖ್ಯೆ: 5531
ರಾಜಾಜಿನಗರ, ಬೆಂಗಳೂರು-560 055